ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.1667/2021

ಸಿ.ಡಬ್ಲ್ಯೂ -03
ಪಿ.ಡಬ್ಲ್ಯೂ - 02

ಸಾಕ್ಷಿದಾರನ ಹೆಸರುಃ- ಶಿವಕುಮಾರ್
ತಂದೆ ಹೆಸರು ಃ- ಭೈರಯ್ಯ
ವಯಸ್ಸು ಃ- 53 ವರ್ಷ
ಉದ್ಯೋಗ ಃ- ವ್ಯವಸಾಯ
ವಾಸ ಃ- ಚನ್ನತಿಮ್ಮನಪಾಳ್ಯ , ಕುಣಿಗಲ್

**ಸಾಕ್ಷಿಗೆ ದಿಃ18.01.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಮೃತ ಚಿಕ್ಕಮ್ಮ ನನಗೆ ಗೊತ್ತಿಲ್ಲ. ಅವರಿಗೆ ಏನಾಗಿತ್ತು ಎಂದು ಗೊತ್ತಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ , ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಗೆ ಪಂಚನಾಮೆ ಮತ್ತು ಖಚ್ಚಾ ನಕಾಶೆಯನ್ನು ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿುತು, ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-2 ಮತ್ತು 3 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ. ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 06-12-2020 ರಂದು ನನ್ನ ಕೆಲಸದ ನಿಮಿತ್ತ ನಾಗಸಂದ್ರಕ್ಕೆ ಬಂದು ವಾಪಸ್ಸು ಹೊಗಲು ನಾಗಸಂದ್ರ ಸಿ ಎಸ್ ಪುರ ಸಾರ್ವಜನಿಕ ರಸ್ತೆಯಲ್ಲಿ ಬೈಕ್ ಚಲಾಯಿಸಿಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಂತರ ಬೆ- 11-30 ರ ಗಂಟೆಯ ಸಮಯದಲ್ಲಿ ನಾಗಸಂದ್ರ ಕಡೆಯಿಂದ ಸಿ ಎಸ್ ಪುರ ಕಡೆಗೆ ಹೋಗಲು ಒಂದು ಕಾರನ್ನು ಚಾಲಕ ಓವರ್ ಟೇಕ್ ಮಾಡಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಅದೇ ಸಮಯಕ್ಕೆ ಎಲ್ಲಾಪುರ ಕಡೆಯಿಂದ ಹುರಳಗೆರೆ ಕಡೆಗೆ ಹೊಗುತ್ತಿದ್ದ ಟಿ ವಿ ಎಸ್ ದ್ವಿ-ಚಕ್ರ ವಾಹನಕ್ಕೆ

ಅಪಘಾತಪಡಿಸಿ ನಿಲ್ಲಿಸಿದನು ಎಂದರೆ ನನಗೆ ಗೊತ್ತಿಲ್ಲ. ನಂತರ ಟಿ ವಿ ಎಸ್ ವಾಹನದಲ್ಲಿ ಇದ್ದವರನ್ನು ಏತ್ತಿ ಉಪಚರಿಸಲು ನೋಡಲಾಗಿ ಸದರಿಯವರು ಹುರಳಗೆರೆ ಗ್ರಾಮದ ನನಗೆ ಪರಿಚಯವಿದ್ದ ಚಿಕ್ಕಮ್ಮ ಅಕೆಯ ಗಂಡ ಗಂಗಣ್ಣ ಇವರ ತಂಗಿಯ ಮಗಳು ಉಮಾ ರವರು ಆಗಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಗಂಗಣ್ಣನಿಗೆ ಮುಖಕಕ್ಕೆ ತಲೆಗೆ ರಕ್ತಗಾಯವಾಗಿ ಎರಡು ಕಾಲು ಮುರಿದು ಹೋಗಿದ್ದು ಚಿಕ್ಕಮ್ಮಳಿಗೆ ತಲೆಗೆ , ಎರಡು ಕೈ ಕಾಲುಗಳಿಗೆ ರಕ್ತಗಾಯವಾಗಿ ಕಿವಿ ಮತ್ತು ಬಾಯಿಯಿಂದ ರಕ್ತ ಬರುತ್ತಿತ್ತು ಎಂದರೆ ಗೊತ್ತಿಲ್ಲ, ಉಮಾಳಿಗೆ ಮುಖಕ್ಕೆ ಎರಡು ಭುಜಗಳಿಗೆ ಕೈ , ಕೈಲುಗಳಿಗೆ ರಕ್ತಗಾಯಗಳು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಅಪಘಾತಕ್ಕೆ ಒಳಗಾದ ಎರಡೂ ವಾಹನಗಳು ಜಖಂ ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ಮಾರುತಿ ಸ್ವಿಫ್ಟ್ ಡಿಸೈರ್ ಕಾರ್ ನಂ. ಕೆಎ- 02-ಎಂಕೆ-0166 ಮತ್ತು ಟಿ ವಿ ಎಸ್ ನಂ. ಕೆಎ- 41- ಕ್ಯೂ -4193 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಕಾರಿನ ಚಾಲಕನ ಹೆಸರು ಕೇಳಿದಾಗ ವರದರಾಜು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ ನಾವು ಚಾಸಾ.1 ರವರನ್ನು ಕರೆಸಿಕೊಂಡು ಗಾಯಾಳುಗಳನ್ನು 108 ಅಂಬುಲೆನ್ಸ್ ವಾಹನದಲ್ಲಿ ಬೆಳ್ಳೂರಿನ ಎ ಸಿ ಗಿರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ.

ಅಪಘಾತ ವಿಷಯವಾಗಿ ಚಾಸಾ.1 ರವರು ಅಮೃತೂರು ಪೊಲೀಸ್ ಠಾಣೆ ದೂರು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೂತ್ತಿಲ್ಲ. ದಿನಾಂಕ 07-12-2020 ರಂದುಚಾಸಾ.1 ರವರಿಂದ ಚಿಕ್ಕಮ್ಮ ಬೆಳ್ಳೂರು ಎ ಸಿ ಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸಯನ್ನು ಪಡೆಯುತ್ತಿದ್ದಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಾಯಿತು. ಅಪಘಾತಪಡಿಸಲು ಅರೋಪಿ ವರದರಾಜುನನ್ನು ನಾನು ನೋಡಿ ಗುರುತಿಸಿರುತ್ತೇನೆಂದರೆ ಸರಿಯಲ್ಲ. ದಿನಾಂಕಃ 06-12-2020 ರಂದು 4-30 ರಿಂ 5-30 ರ ಸಮಯದಲ್ಲಿ ಪೊಲೀಸರು ಘಟನಾ ಸ್ಥ,ಳಕ್ಕೆ ಬಂದು ಚಾಸಾ.4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿ ಖಚ್ಚಾ ನಕಾಶೆಯನ್ನು ತಯಾರಿಸಿ ಅಪಘಾತಪಡಿಸಿದ ವಾಹನಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 09-12-2020 ರಂದು ಪೊಲೀಸರಿಗೆ ನಾನು ಅಪಘಾತದ ವಿಚಾರವಾಗಿ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ, ಸಾಕ್ಷಿಯು ಒಪ್ಪಿಕೊಳ್ಳದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಸದರಿ ಅಪಘಾತವು ಅರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)
ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.